ಉಪಯೋಗಿಸುವಂತಹದ್ದು ಮತ್ತು ಅಂತರ್ಜಲವನ್ನು ಹೆಚ್ಚಾಗಿ ಉಪಯೋಗಿಸಿ ಕೊಳ್ಳುವುದರ ಮೂಲಕವಾಗಿ ನೀರನ್ನು ಒದಗಿಸಿ ಕೊಡುವಂತಹದ್ದು, ಇವೆಲ್ಲವನ್ನೂ ಪ್ರಯತ್ನ ಮಾಡುತ್ತಿದ್ದೇವೆ. ಹಾಗೆ ಅಲ್ಲಿರುವಂತಹ ಕೆರೆಗಳನ್ನು ಕೂಡ ಪುನರುಜ್ಜೀವನಗೊಳಿಸುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಸರ್ಕಾರವು ಮಾಡುತ್ತದೆ.

ಗುಲ್ಬರ್ಗಾಕ್ಕೆ ವಿಶೇಷಸ್ಥಾನ ನೀಡುವ ಬಗ್ಗೆ

254 (1359) ಶ್ರೀ ಗುರುಪಾದಪ್ಪ ನಾಗರಮಾರಪಲ್ಲಿ (ಔರಾದ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದರಾಬಾದ್ ಕರ್ನಾಟಕ ಪ್ರದೇಶದ ಕೇಂದ್ರ ಸ್ಥಾನವಾದ ಗುಲ್ಬರ್ಗಾಕ್ಕೆ ಸಂವಿಧಾನದ ಪರಿಚ್ಛೇದ 370ರ ಕಲಂನನ್ವಯ ವಿಶೇಷ ಸ್ಥಾನವನ್ನು ನೀಡಿರುವ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ವಿಚಾರ ರಾಜ್ಯ ಸರ್ಕಾರದ ಮುಂದೆ ಇದೆಯೇ;

ಆ) ಹಾಗಿದ್ದಲ್ಲಿ, ಇದುವರೆವಿಗೂ ರಾಜ್ಯ ಸರ್ಕಾರವು ಎಷ್ಟು ಬಾರಿ ಕೇಂದ್ರಕ್ಕೆ ಪತ್ರ ಬರೆದಿದೆ; (ಈ ಬಗ್ಗೆ ಪೂರ್ಣ ವಿವರಗಳನ್ನು ಒದಗಿಸುವುದು);

ಇ) ಈ ಬಗ್ಗೆ ಇದುವರೆವಿಗೂ ಕೇಂದ್ರ ಸರ್ಕಾರಕ್ಕೆ ರಾಜ್ಯದ ಸರ್ವಪಕ್ಷಗಳ ನಿಯೋಗವನ್ನೇನಾದರೂ ಕರೆದುಕೊಂಡು ಹೋಗಲಾಗಿದೆಯೇ;

ಈ) ಹಾಗಿಲ್ಲದಿದ್ದಲ್ಲಿ, ಅಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿ) :

ಅ) ಗುಲ್ಬರ್ಗಾ ಸೇರಿದಂತೆ ಸಂಪೂರ್ಣ ಹೈದ್ರಾಬಾದ್ ಕರ್ನಾಟಕಕ್ಕೆ ಸಂವಿಧಾನದ ಕಲಂ 371–ಡಿ ಅನ್ವಯ ವಿಶೇಷ ಸ್ಥಾನಮಾನ ನೀಡಲು ಸಂವಿಧಾನಕ್ಕೆ ತಿದ್ದುಪಡಿ ತರಲು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಆ) 31

ಇ) ಹೌದು

ಈ) ಮೇಲೆ (ಇ) ಗೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಉಪಾಧ್ಯಕ್ಷರೆ, ಸಂವಿಧಾನದ ಪರಿಚ್ಛೇದ 371ರ ಅಡಿಯಲ್ಲಿ ವಿಶೇಷವಾದ ಸ್ಥಾನಮಾನವನ್ನು

ಕೊಡುತ್ತೀರಾ ಅಥವಾ ಸುತ್ತೋಲೆಯನ್ನು ಸರ್ಕಾರದಿಂದ ಕಳುಹಿಸಿದ್ದೀರಾ ಎಂದು ಕೇಳಿದ್ದೆ. ಕೇಂದ್ರ ಸರ್ಕಾರಕ್ಕೆ ಎಷ್ಟು ಸಾರಿ ಕಳುಹಿಸಿದ್ದೀರಿ, ನೀವು ಏನಾದರೂ ನಿಯೋಗವನ್ನು ಕರೆದುಕೊಂಡು ಹೋಗಿದ್ದೀರಾ ಎಂದು ಕೇಳಿದ್ದೇನೆ. ಹೌದು ಎಂದು ಹೇಳಿದ್ದಾರೆ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಸಾರಿ ನಿಯೋಗವನ್ನು ಕರೆದುಕೊಂಡು ಹೋಗಿದ್ದೀರಿ? ಅದರ ಬಗ್ಗೆ ಏನಾದರೂ ಚಿಂತನೆ ಇದೆಯಾ? ಅದನ್ನು ಹೇಳಬೇಕು.

ಶ್ರೀ ಎಂ.ಪಿ.ಪ್ರಕಾಶ್ : ಇಲ್ಲಿ ನಮ್ಮ ಸರ್ಕಾರ ನಿಮ್ಮ ಸರ್ಕಾರ ಎನ್ನುವುದಕ್ಕಿಂತ ಹೆಚ್ಚಾಗಿ 371ರ ಸಂವಿಧಾನದ ಕಲಂನ ತಿದ್ದುಪಡಿ ಮಾಡುವುದರ ಮೂಲಕವಾಗಿ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುವ ಬಗ್ಗೆ ಅದಕ್ಕೆ ರಚನಾತ್ಮಕವಾದ ಕಾರ್ಯಕ್ರಮಗಳನ್ನು ಇವತ್ತು ಸವಲತ್ತುಗಳನ್ನು ಒದಗಿಸಿಕೊಡಬೇಕೆಂಬ ಮುಖ್ಯ ಉದ್ದೇಶ ಇದೆ. ಆ ಕಾರಣಕ್ಕಾಗಿ 31 ಬಾರಿ, ಎಲ್ಲಾ ಸರ್ಕಾರಗಳು ಇರಬಹುದು, ಸನ್ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಧರ್ಮಸಿಂಗ್‌ರವರ ಕಾಲದಲ್ಲಿ 2–3 ಬಾರಿ ಸರ್ವಪಕ್ಷಗಳ ನಿಯೋಗವನ್ನು ಕರೆದುಕೊಂಡು ಹೋಗಿದ್ದರು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹೋಗಿದ್ದೀರಾ?

ಶ್ರೀ ಎಂ.ಪಿ.ಪ್ರಕಾಶ್ : ಅವರ ಕಾಲದಲ್ಲಿಯೂ ಕೂಡ ನಾವು ಒಂದು ಬಾರಿ ಸರ್ವಪಕ್ಷಗಳ ನಿಯೋಗ ಹೋಗಿದ್ದೆವು. 2–3 ಬಾರಿಗೆ ನಿಮಗೆ ಗೊತ್ತಿದ್ದಂತೆ ಅವರು ನಿಯೋಗಗಳನ್ನು ಬೇರೆ ಬೇರೆ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ತೆಗೆದುಕೊಂಡು ಹೋದಂತಹ ಸಂದರ್ಭದಲ್ಲಿ 371 ವಿಧಿಯನ್ನು ಬದಲಿಸಬೇಕು ಎನ್ನುವಂತಹ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದರು. ನಮ್ಮ ಸರ್ಕಾರ ಬಂದಾಗಲೂ ಕೂಡ ಒಂದು ಬಾರಿ ಸರ್ವಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಹೋಗಿದ್ದೇವೆ. ಮಾನ್ಯ ಕುಮಾರಸ್ವಾಮಿಯವರ ನೇತೃತ್ವದಲ್ಲಿ ಇದು ಆಗಿದೆ. ಅದರ ಜೊತೆಗೆ ಬೇರೆ ಬೇರೆ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳನ್ನು ಮತ್ತು ಗೃಹಮಂತ್ರಿಗಳನ್ನು ಕಾಣುವಂತಹ ಸಂದರ್ಭದಲ್ಲಿ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಕೇಂದ್ರ ಸರ್ಕಾರದ ನೆರವು, ಆಂಧ್ರಪ್ರದೇಶಕ್ಕೆ ಮತ್ತು ಮಹಾರಾಷ್ಟ್ರಕ್ಕೆ ಆಯಾಯ ಸಂದರ್ಭದಲ್ಲಿ ಕೊಟ್ಟಂತಹ ಕೆಲವು ರಿಯಾಯಿತಿಗಳು ಏನಿವೆ, ಆ ಸಂದರ್ಭ ಕರ್ನಾಟಕ ರಾಜ್ಯಕ್ಕೆ ಇಲ್ಲ. ಭಾಷಾವಾರು ಪ್ರಾಂತ್ಯಗಳನ್ನು ನಿರ್ಮಾಣ ಮಾಡುವಂತಹ ಸಂದರ್ಭದಲ್ಲಿ

ಅಂದರೆ 56ರ ಸಂದರ್ಭದಲ್ಲಿ ನಾವು ಕೆಲವು ನಿರ್ಬಂಧಗಳನ್ನು ಹಾಕಲಿಲ್ಲ. ಇದರ ಬಗ್ಗೆ ಮಾಹಾರಾಷ್ಟ್ರ ಒಂದು ಪ್ರಾಂತ್ಯವನ್ನು 1961ರ ನಂತರ ರಚನೆಯನ್ನು ಮಾಡಿತ್ತು. ಆ ಸಂದರ್ಭದಲ್ಲಿ ವಿದರ್ಭದವರು ಮಹಾರಾಷ್ಟ್ರದ ಜೊತೆಗೆ ಸೇರುವುದಿಲ್ಲ ನಾವು, ಬಹಳ ಬೆಳೆದಿರುವಂತಹ ಪ್ರದೇಶದ ಜೊತೆಗೆ ನಮಗೆ ಪ್ರಾದೇಶಿಕ ಅಸಮಾನತೆ ಉಂಟಾಗುತ್ತದೆ ಎಂದಾಗ ಕೆಲವು ಷರತ್ತುಗಳನ್ನು ವಿಧಿಸಿದರು. ಹಾಗೆಯೇ ಆಂಧ್ರಪ್ರದೇಶದ ತೆಲಂಗಾಣ ಪ್ರದೇಶದಲ್ಲಿಯೂ ಕೂಡ ಅವರು ಕೆಲವು ಷರತ್ತುಗಳನ್ನು ಹಾಕಿದ್ದರಿಂದ ಅವರಿಗೆ ವಿಶೇಷವಾಗಿರುವಂತಹ ರಕ್ಷಣಾತ್ಮಕ ಕ್ರಮಗಳನ್ನು ಭಾಷಾವಾರು ಪ್ರಾಂತ್ಯಗಳನ್ನು ಪುನರ್ ವಿಂಗಡಣೆಯ ಸಂದರ್ಭದಲ್ಲಿಯೂ ಕೊಟ್ಟು ಸಂವಿಧಾನದಲ್ಲಿ ಅವಕಾಶ ಮಾಡಿ ಕೊಟ್ಟಿದ್ದಾರೆ. ಆದರೆ ನಮ್ಮಲ್ಲಿ ಬೇರೆ ಪ್ರಾಂತ್ಯಗಳಿಂದ ಕರ್ನಾಟಕ ರಚನೆ ಮಾಡುವಂತಹ ತವಕದಲ್ಲಿದ್ದೇವೆ. ಆ ಒಂದು ಭಾವೋದ್ವೇಗದ ಹಿನ್ನೆಲೆಯಲ್ಲಿ ಇಂತಹ ಯಾವ ಕ್ರಮಗಳನ್ನು ಕೈಗೊಳ್ಳದೇ ಭಾಷಾವಾರು ಪ್ರಾಂತ್ಯಗಳನ್ನು ರಚನೆ ಮಾಡಿ ಆ ಸಂದರ್ಭದಲ್ಲಿ ಅವುಗಳು 1956 ನವೆಂಬರ್ 1ನೇ ತಾರೀಖು ಅಸ್ತಿತ್ವಕ್ಕೆ ಬಂದಿದ್ದರಿಂದ ಕೆಲವು ನ್ಯೂನತೆಗಳು ಆದವು. ಮಾನ್ಯ ವೈಜನಾಥ್ ಪಾಟೀಲ್‌ರವರು ಇದರ ಬಗ್ಗೆ ಪದೇ ಪದೇ ವಿಚಾರವನ್ನು ವ್ಯಕ್ತ ಮಾಡಿದ್ದಾರೆ ಹಾಗೂ ಹೋರಾಟವನ್ನು ಮಾಡಿದ್ದಾರೆ. ಈಗ ನಾವು ಪತ್ರವನ್ನು ಬರೆದಿದ್ದೇವೆ. ಕೇಂದ್ರ ಸರ್ಕಾರ ಸಹಾನುಭೂತಿಯಿಂದ ನೋಡುತ್ತಾರೆನ್ನುವಂತಹ ಮಾತನ್ನು ಹೇಳಿದ್ದಾರೆ. ಮಾನ್ಯ ಧರ್ಮಸಿಂಗ್‌ರವರು ಇದರ ಬಗ್ಗೆ ಮಾನ್ಯ ಗೃಹ ಮಂತ್ರಿಗಳಿಗೆ ಮನವರಿಕೆಯನ್ನು ಮಾಡಿಕೊಟ್ಟಿದ್ದಾರೆ. ಪ್ರಾದೇಶಿಕ ಅಸಮಾನತೆಯನ್ನು ಸರಿಪಡಿಸುವುದಕ್ಕೆ ಇದು ಏಕಮೇವ ಮಾರ್ಗ ಎನ್ನುವಂತಹದ್ದು ಎಂದು ಅವರು ತಿಳಿಸಿದ್ದಾರೆ.

(12-00 PM)

ಶ್ರೀ ಎನ್.ಧರ್ಮಸಿಂಗ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗೃಹ ಸಚಿವರು ವಿವರಗಳನ್ನು ಕೊಟ್ಟಿದ್ದಾರೆ. ಗುರುಪಾದಪ್ಪನವರು ಮಾನ್ಯ ವೈಜನಾಥ್ ಪಾಟೀಲ್‌ರು, ಬಿ.ಆರ್.ಪಾಟೀಲರು ಈ ಬಗ್ಗೆ ಪ್ರತಿಪಾದನೆಯನ್ನು ಮಾಡಿದ್ದಾರೆ. ಇವತ್ತು Regional Im balance ಏನಾಯಿತು? ಅದಕ್ಕೆ ಪ್ರಾದೇಶಿಕ ಮಂಡಳಿ ರಚನೆಯಾಗಿದೆ. ನಮ್ಮ ಬಜೆಟ್‌ನಲ್ಲಿ ಅದಕ್ಕೆ ಹೆಚ್ಚಿನ ಹಣವನ್ನು ಕೊಡತಕ್ಕಂತಹ ಕೆಲಸ ಆಗಿದೆ. ಅದಕ್ಕೆ ನಾವು ಕೂಡ ಮಾನ್ಯ ನಂಜುಂಡಪ್ಪನವರ ವರದಿಯ ಪ್ರಕಾರ ಹಣವನ್ನು ಬಿಡುಗಡೆ

ಮಾಡಿರುವಂತಹ ರೀತಿಯಲ್ಲಿ ನಾಳೆ ದಿವಸ ಬಿ.ಆರ್.ಪಾಟೀಲ್‌ರವರು ನಿಲುವಳಿ ಸೂಚನೆಯನ್ನು ತರುತ್ತಾರೆ. ಅದರ ಬಗ್ಗೆ ನಾಳೆ ಮಾತನಾಡೋಣ. ತಾವು ಗೃಹ ಸಚಿವರಾಗಿದ್ದೀರಿ. ಕೇಂದ್ರ ಸಚಿವರಾ– ದಂತಹ ಶ್ರೀ ಶಿವರಾಜ್ ಪಾಟೀಲ್‌ರವರ ಜೊತೆಗೆ ತಮಗೆ ಒಳ್ಳೆಯ ಸಂಬಂಧ ಇದೆ. ನಮಗೂ ಕೂಡ ಸಂಬಂಧ ಇದೆ. ಪ್ರತ್ಯೇಕವಾಗಿ ಆ ಭಾಗದ ಜನರಿಗೆ ನ್ಯಾಯ ಸಿಗಬೇಕು. Job opportunities ಇದೆ. University levelನಲ್ಲಿ ಬಹಳಷ್ಟು ವಿಚಾರಗಳು ಇವೆ. ಬೇರೆ ಕಡೆಗೆ ಪ್ರತಿ ರಾಷ್ಟ್ರದಲ್ಲಿ ಬಹಳಷ್ಟು ಕೂಡ ಉದ್ಯೋಗಾವ ಕಾಶಗಳು ಆಗಿದೆ. 1986ರಲ್ಲಿ ದಿವಂಗತ ಡಾ: ಎನ್.ಚೆನ್ನಾರೆಡ್ಡಿಯವರ ನೇತೃತ್ವದಲ್ಲಿ 6 ತಿಂಗಳುಗಳ ಕಾಲ ತೆಲಂಗಣ ಪ್ರಜಾ ಸಮಿತಿ ದೊಡ್ಡಹೋರಾಟವಾಯಿತು. ಆರು ತಿಂಗಳ ಕಾಲ agitation ಈ ದೇಶದಲ್ಲಿ ಬೇರೆ ಎಲ್ಲಿಯೂ ಕೂಡ ಆಗಲಿಲ್ಲ. ಇದು ಆದ ಮೇಲೆ ಶ್ರೀಮತಿ ಇಂದಿರಾಗಾಂಧಿಯವರು ಈ ದೇಶದ ಪ್ರಧಾನ ಮಂತ್ರಿಯಾದಾಗ 100 ಕೋಟಿ ರೂಪಾಯಿಗಳ special ಅನುದಾನವನ್ನು ಕೊಟ್ಟಿದ್ದಾರೆ. ಇವತ್ತು ನಾವು ಏನು ಹೋರಾಟವನ್ನು ಮಾಡುತ್ತಿದ್ದೇವೆ. ಮಾನ್ಯ ವೈಜನಾಥ್ ಪಾಟೀಲ್‌ರವರ ಹೆಸರೇ ನಾವು ಸಂವಿಧಾನದ ಕಲಂ 371 ಎಂದು ಇಟ್ಟೆವು. ಏಕೆಂದರೆ ಅವರು ಈಗ ಹೇಳುತ್ತಿದ್ದಾರೆ. ಆ ಭಾಗದ ಜನರಿಗೆ ಇವತ್ತು ಅನ್ಯಾಯವಾಗುತ್ತಿದೆ. ಒಂದು Multi Purpose High School ಗುಲ್ಬರ್ಗಾದಲ್ಲಿತ್ತು. ನಾವು ಅಲ್ಲಿಯೇ ಓದಿದ್ದು, ಆವಾಗ ಮೈಸೂರಿನಲ್ಲಿ Mysore University ಇತ್ತು. Regional imbalance ಏನು ಇದೆ, ಮತ್ತು Public Service Commission ಆಗಲಿ, ಬೇರೆ ಕಡೆಯಾಗಲಿ complete ಮಾಡತಕ್ಕಂತಹ ಶಕ್ತಿ ಕೂಡ ಆ ಭಾಗದ ಜನರಿಗೆ ಇಲ್ಲ. ನಾನು ಮುಖ್ಯಮಂತ್ರಿಯಾಗಿದ್ದಾಗ ತಾವು ಕೂಡ ಉಪ ಮುಖ್ಯಮ್ಯಂತ್ರಿಗಳಾಗಿದ್ದೀರಿ, ಮಾನ್ಯ ಸಿದ್ದರಾಮಯ್ಯನವರು ಇದ್ದರು, ನಾವು ಕೇಂದ್ರ ಸರ್ಕಾರಕ್ಕೆ ಮಾನ್ಯ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಲು ಹೋಗಿದ್ದೆವು. Repeatedly I requested Shivaraj Patil, "Sir, ನೀವು ಅಮೆಂಡ್‌ಮೆಂಟ್‌ನ್ನು ತನ್ನಿ ಹೌಸ್‌ನಲ್ಲಿ ಅಮೆಂಡ್‌ಮೆಂಟ್‌ನ್ನು ತರಬೇಕಾ ಗುತ್ತದೆ ತನ್ನಿ" ಎಂದು ಹೇಳಿದರು. ಅದು ಆದ ಮೇಲೆ ಒಂದು ಪತ್ರವನ್ನು ಬರೆದರು. ವಿದರ್ಭ ಮಾದರಿಯ ಬಗ್ಗೆ ನಮಗೆ ಒಪ್ಪಿಗೆ ಇದೆ ಎಂದು ಹೇಳಿದರು. ನಾನು ಆಗ ಮುಖ್ಯಮಂತ್ರಿಯಾಗಿ ನಿಮ್ಮ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿ ವಿದರ್ಭ ಮಾದರಿ ನಮಗೆ ಸಮಾಧಾನವನ್ನು

ತರುವಂತಹದ್ದು ಅಲ್ಲ. ಸಂವಿಧಾನದ 371 ಕಲಂ ತಿದ್ದುಪಡಿ ಮಾಡಿದರೆ ಆ ಭಾಗದ ಜನರಿಗೆ ಇವತ್ತು ಒಳ್ಳೆಯದು ಆಗುತ್ತದೆ ಎಂದು ಹೇಳಿದೆ. SRC ಬಗ್ಗೆ ಹೇಳುತ್ತಿದ್ದೀರಿ, ಫಜಲ್ ಅಲಿ ಕಮಿಷನ್ ಬಗ್ಗೆ ಹೇಳುತ್ತಿದ್ದೀರಿ. ಇದರಲ್ಲಿ ಸಾಕಷ್ಟು ವಿಷಯಗಳು ಪ್ರಸ್ತಾಪವಾಗಿದೆ. ತಾವು ಹೇಳತಕ್ಕಂತದ್ದು, ಸಮ್ಮಿಶ್ರ ಬಂಧ ಮೇಲೆ ನಾವು ಮತ್ತು ಉಪ ಮುಖ್ಯಮಂತ್ರಿ ಯಾಗಿದ್ದ ಸಿದ್ದರಾಮಯ್ಯನವರು ಮತ್ತು ತಾವು ಉಪ ಮುಖ್ಯಮಂತ್ರಿಯಾದಿರಿ, ನಾವು ಮತ್ತು ನೀವುಗಳು ಜೊತೆಯಾಗಿ ಹೋಗಿ ಆಗಿದೆ. ಆಗಿನ ಕಾಲದಲ್ಲಿ ಪ್ರಧಾನಮಂತ್ರಿಯಾಗಿದ್ದ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರನ್ನು ಭೇಟಿಯಾಗಿದ್ದಾಗ, ಅವರು ನೇರವಾಗಿ ನಮ್ಮನ್ನು ಕರೆಸಿದರು. ಅವರು ಏನು ಹೇಳುತ್ತಾರೆ, there is a force in it. ಏತಕ್ಕಾಗಿ ತಾವು ಅದನ್ನು ಅನುಷ್ಠಾನಕ್ಕೆ ತರುವಂತಹ ಕೆಲಸವನ್ನು ಮಾಡುತ್ತಿಲ್ಲ. ಪ್ರಧಾನ ಮಂತ್ರಿಗಳು ಕೂಡ ಆ ಒಂದು ಭಾವನೆಯನ್ನು ತಾಳಿದ್ದಾರೆ. ಇಲ್ಲಿಗೆ ಪ್ರಧಾನಮಂತ್ರಿಗಳು ಕೂಡ ಬರುತ್ತಿದ್ದಾರೆ. 3ನೇ ತಾರೀಖು ಇಲ್ಲಿ ಮೀಟಿಂಗ್ ಇದೆ. ಅಲ್ಲಿ ಕೂಡ ತಾವು ಪ್ರಸ್ತಾಪ ಮಾಡಬೇಕು. ಮಾನ್ಯ ಪ್ರಕಾಶ್‌ರವರು, he is a Senior Minister, ಎಲ್ಲಾ ಕಾಲದಲ್ಲಿಯೂ ಅವರು ಕೆಲಸವನ್ನು ಮಾಡಿದ್ದಾರೆ. ಒಂದು ನೀವು ಸದನಕ್ಕೆ ಆಶ್ವಾಸನೆಯನ್ನು ಕೊಡಬೇಕು. ಈ ಒಂದು ಸಮ್ಮಿಶ್ರ ಸರ್ಕಾರದ ನೇತೃತ್ವದಲ್ಲಿ ಸರ್ವಪಕ್ಷದ ನಿಯೋಗ ಮತ್ತೊಮ್ಮೆ ಮಾನ್ಯ ಪ್ರಧಾನಮಂತ್ರಿಗಳನ್ನು ಹಾಗೂ ಮಾನ್ಯ ಗೃಹ ಸಚಿವರಾದ ಶ್ರೀ ಶಿವರಾಜ್ ಪಾಟೀಲ್‌ರವರನ್ನು ಭೇಟಿಯಾಗಿ ಮನವರಿಕೆಯನ್ನು ಮಾಡಿಕೊಡಬೇಕು. ನಾವು We are requesting repeatedly. With all that it has not materialized. ಅದಕ್ಕೆ ತಾವು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಇದು ಕೇಂದ್ರಕ್ಕೆ ಹೋಗಿದೆ, ಒಂದು ಸಲ ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಸರ್ವಪಕ್ಷಗಳ ನಿಯೋಗ ಹೋಯಿತು. ಅದಾದ ನಂತರ ಹೊಸ ಸರ್ಕಾರ ಅಧಿಕಾರಕ್ಕೆ ಬಂತು. ಧರ್ಮಸಿಂಗ್ ರವರ ನೇತೃತ್ವದಲ್ಲಿ ಒಂದು ಹೊಸ ಸರ್ಕಾರ ನೀತಿ ಬಂತು. ನಾವು ಸಂವಿಧಾನದ ಕಲಂ 371 ಅಮೆಂಡ್‌ಮೆಂಟ್ ಮಾಡಬೇಕೆಂದು ಹೇಳಿದೆವು. ಅವರು ಕೂಡ ಒಂದು ಸರ್ವಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಹೋದರು. ಈಗ ಏನು ಹೊಸ ಸರ್ಕಾರ ಅಧಿಕಾರಕ್ಕೆ ಬಂದಿದೆ. ಈ ಸರ್ಕಾರ ಬಂದು 18

ತಿಂಗಳಿನಿಂದ ಒಂದು ಸರ್ವಪಕ್ಷಗಳ ನಿಯೋಗವನ್ನು ಕರೆದುಕೊಂಡು ಹೋಗಬೇಕಾಗಿತ್ತು. ಸಂವಿಧಾನದ ಕಲಂ 371 ಅಮೆಂಡ್‌ಮೆಂಟ್ ಬೇಡುತ್ತೀರೋ ಇಲ್ಲವೋ ಎಂಬುದು ನಿಮ್ಮ ನೀತಿ ತೋರಿಸುತ್ತದೆ. ಒಂದೇ ಸರ್ಕಾರದಲ್ಲಿ ಇಬ್ಬಿಬ್ಬರು ಮುಖ್ಯಮಂತ್ರಿಗಳು ಹೋದರೂ ಕೂಡ ಈ ಸರ್ಕಾರದ ನೀತಿ ಏನು ಇದೆ. 371ಕ್ಕೆ ಅಮೆಂಡ್‌ಮೆಂಟ್ ಮಾಡುತ್ತೀರೋ ಅಥವಾ ಇಲ್ಲವೋ ಆ ದೃಷ್ಟಿಯಿಂದ ಇವರು ಒಂದು ನಿಯೋಗವನ್ನು ತೆಗೆದುಕೊಂಡು ಹೋಗಿಲ್ಲ. ಈ ಮುಂಚೆ ಎರಡು ನಿಯೋಗಗಳು ಹೋಗಿದ್ದವು. ಹೊಸ ಸರ್ಕಾರ ಸರ್ವ ಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಹೋಗಿ ಮತ್ತು ಅಸೆಂಬ್ಲಿಯಲ್ಲಿ ಒಂದು resolution pass ಮಾಡಿ ಎಂದು ನಾವು ಒಂದು ಪ್ರಸ್ತಾವನೆಯನ್ನು ಮೂವ್ ಮಾಡಿದ್ದೆವು. ಆದರೆ ಅದು Private Members Bill ನೊಳಗಡೆ ಹಾಕಿದ್ದಾರೆ. ಅದು ಬರೀ ಶುಕ್ರವಾರ ದಿವಸ ಬರುತ್ತದೆ, ಬೇರೆ ದಿವಸ ಅದು ಬರುವುದಿಲ್ಲ. ಆ ದೃಷ್ಟಿಯಿಂದ ನಾನು ಸರ್ಕಾರಕ್ಕೆ ಪುನಃ ಕೇಳುತ್ತಿದ್ದೇನೆ. ನೀವು ಇಲ್ಲಿ ಒಂದು resolution pass ಮಾಡಿ. ಈ ಸರ್ಕಾರ ಕಲಂ 371ಕ್ಕೆ ತಿದ್ದುಪಡಿ ತರುತ್ತೇವೆಂದು ಹೇಳಲಿ ಹಾಗೂ ಸರ್ವಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಕೇಂದ್ರಕ್ಕೆ ತೆಗೆದುಕೊಂಡು ಹೋಗಿ ಎಂದು ನಾನು ಸರ್ಕಾರವನ್ನು ಪುನಃ ಕೇಳುತ್ತಿದ್ದೇನೆ.

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಇದು ಪದೇ ಪದೇ ಪ್ರಸ್ತಾಪವಾಗುತ್ತಿದೆ. ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈ ಬಗ್ಗೆ ಏನಾದರೂ ದಿಟ್ಟವಾದ ನಿರ್ಧಾರವನ್ನು ತಾವು ತೆಗೆದುಕೊಳ್ಳಬೇಕು. ಸುಮ್ಮನೆ ನಾವು ಇಲ್ಲಿ ಚರ್ಚೆ ಮಾಡಿ ಏನು ಕೆಲಸಗಳು ಆಗದೇ ಹೋದರೆ ಈ ಸದನದ ಬಗ್ಗೆ ಗೌರವ ಉಳಿಯುವುದಿಲ್ಲ. ಜನರು ಕೂಡ ತಪ್ಪು ತಿಳಿದುಕೊಳ್ಳುತ್ತಾರೆ. ಈಗ ಮಾನ್ಯ ವೈಜನಾಥ್ ಪಾಟೀಲ್‌ರವರು 371 ಕಲಂಗೆ ತಿದ್ದುಪಡಿ ತರಬೇಕೆಂಬ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಮಾನ್ಯ ಧರ್ಮಸಿಂಗ್‌ರವರು ಕೂಡ ಈ ಬಗ್ಗೆ ಹೇಳಿದರು. ಇವತ್ತು ಮೆರಿಟ್‌ನಲ್ಲಿ ಹುಡುಗರು ಚಿಕ್ಕಮಗಳೂರು Primary, High School ಗಳಿಗೆ ಚಿಕ್ಕಮಗಳೂರು ಮತ್ತು ಮಂಗಳೂರು ಕಡೆಯಿಂದ ಬಂದಿದ್ದಾರೆ. ಅವರು ಇಲ್ಲಿಗೆ ಬಂದು transfer ಮಾಡಿಕೊಂಡು ಹೋಗುತ್ತಾರೆ. ಈ ಜನರಲ್ ಮೆರಿಟ್‌ನಲ್ಲಿ ಬಂದಾಗ ನಮ್ಮವರಿಗೆ ಇಲ್ಲಿ ಅವಕಾಶಗಳು ಸಿಗುತ್ತಿಲ್ಲ. 371

ಕಲಂಗೆ ತಿದ್ದುಪಡಿಯಾದ ಮೇಲೆ ನಮ್ಮ ರಾಜ್ಯ ಸರ್ಕಾರದವರೇ ವಿಶೇಷವಾದ ಕಾನೂನನ್ನು ಮಾಡಿಕೊಂಡು ಆಯಾಯ ಭಾಗದ ಜನರಿಗೆ ನ್ಯಾಯ ಕೊಡುವುದಕ್ಕೆ ಸಾಧ್ಯತೆ ಇದೆ. ಹಿಂದೆ ಒಂದು ಸಲ ಮಾನ್ಯ ಉಪಾಧ್ಯಕ್ಷರೆ, ತಮಗೆ ಅನುಭವವಿದೆ. ಮಾನ್ಯ ಬಂಗಾರಪ್ಪನವರು ಗ್ರಾಮೀಣ ಕೃಪಾಂಕವನ್ನು ಕೊಟ್ಟ ಕಾರಣಕ್ಕಾಗಿಯೇ ಬಹಳಷ್ಟು ಗ್ರಾಮೀಣ ವಿದ್ಯಾರ್ಥಿಗಳೂ ಬಂದರು. ಕೆಲವರು Judges ಆದರು. ಅದು ಕೋರ್ಟಿಗೆ ಹೋದ ಮೇಲೆ ಹೊರಟು ಹೋಯಿತು. ಕಾನೂನಿನ ರಕ್ಷಣೆ ಇದ್ದಾಗ ಇದನ್ನು ಸಮಾನವಾಗಿ ತರುವುದಕ್ಕೆ ಸಾಧ್ಯತೆ ಇದೆ. ಆದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರು ಸಮಸ್ಯೆಯನ್ನು ಎತ್ತಿದ್ದಾರೆ. ನಾನು ಮಾನ್ಯ ಪ್ರಕಾಶ್‌ರವರಲ್ಲಿ ಕೇಳಿಕೊಳ್ಳುವುದು ತಾವು ಕೂಡ ಹಿಂದುಳಿದ ಭಾಗದಿಂದ ಬಂಧವರಾಗಿದ್ದೀರಿ. ಇವತ್ತು ಏನು ಮಾನ್ಯ ಪ್ರಧಾನ ಮಂತ್ರಿಗಳು ಬರುವವರಿದ್ದಾರೆ, ಧರ್ಮಸಿಂಗ್‌ರವರು ಹಾಗೂ ಎಲ್ಲರೂ ಇದ್ದೀರಿ, ಏನಾದರೂ ಒಂದು ದಿಟ್ಟವಾದ ಹೆಜ್ಜೆಯನ್ನು ಇಟ್ಟು ಎಲ್ಲಾ ಶಾಸಕರನ್ನು ಕರೆದುಕೊಂಡು ಹೋಗುವಂತಹ ಜಿಲ್ಲೆಗೆ ಹೋಗಿರಿ. ಸರ್ವಪಕ್ಷಗಳ ನಿಯೋಗ ಒಂದೇ ಬೇಡ. ಎಲ್ಲಾ ಭಾಗಕ್ಕೂ ಕೂಡ ಅನುಕೂಲವಾಗುತ್ತದೆ. ಬರೀ ಹೈದರಾಬಾದ್ ಕರ್ನಾಟಕಕ್ಕೆ ಹಿಂದುಳಿದ ಭಾಗಕ್ಕೆ ಅನ್ಯಾಯವಾಗುವುದಿಲ್ಲ. ಎಲ್ಲಾ ಭಾಗಕ್ಕೂ ಕೂಡ ಅನ್ಯಾಯ ವಾಗುತ್ತದೆ. ಅಂತಹ ಒಂದು ಅಧಿಕಾರವನ್ನು ರಾಜ್ಯ ಪಡೆದುಕೊಳ್ಳುವ ಬಗ್ಗೆ ತಾವು ಮುಂದಾಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ : ಇದು ಒಂದು ಬಹಳ ಮಹತ್ವವಾಗಿರುವಂತಹ ಒಂದು ಪ್ರಾದೇಶಿಕವಾದಂತಹ ಸಮಸ್ಯೆ. ಇಡೀ ರಾಜ್ಯ ಸರ್ಕಾರ ಇದರ ಬಗ್ಗೆ ಗಮನವನ್ನು ಹರಿಸಿ ಬಹಳ ವರ್ಷಗಳಿಂದ ಒಂದು ಹೋರಾಟವನ್ನು ಮಾಡುತ್ತಿದೆ. ನಿಜವಾಗಿಯೂ ಹೇಳಬೇಕಾಗಿದ್ದರೆ ಒಂದು ಐತಿಹಾಸಿಕ ವಾದಂತಹ ತಪ್ಪು ಆಗಿದೆ. ಭಾಷಾವಾರು ಪ್ರಾಂತ್ಯಗಳನ್ನು ರಚನೆ ಮಾಡುವಂತಹ ಕಾಲದಲ್ಲಿ ಅಸಮಾನತೆಯಿಂದ ಕೈಗೊಂಡಿರುವಂತಹ ಈ ಪ್ರದೇಶಗಳು ಏಕೀಕೃತವಾದಂತಹ ಕರ್ನಾಟಕಕ್ಕೆ ಬಂದಾಗ ಅವುಗಳಿಗೆ ಏನು ರಕ್ಷಣಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕಾಗಿತ್ತೋ ಅದನ್ನು ಸಂವಿಧಾನದಲ್ಲಿ ಕೈಗೊಳ್ಳುವಂತಹ ಪ್ರಯತ್ನ ಆ ಸಂದರ್ಭದಲ್ಲಿ ಆಗಲಿಲ್ಲ. ಅದಕ್ಕೆ ಬೇರೆ ಕಾರಣಗಳು ಇವೆ, ಇದರಲ್ಲಿ ನಮ್ಮ ಪೂರ್ವಜನರನ್ನು ನಿಂದಿಸುವಂತಹ ಪ್ರಶ್ನೆಯಲ್ಲ. ಆದರೆ ಕರ್ನಾಟಕ ಮತ್ತು ಭಾಷಾವಾರು ಪ್ರಾಂತ್ಯವಾಗಬೇಕೆನ್ನುವ

ತವಕದಿಂದ ಮಾಡಿರುವಂತಹದ್ದು ಆಗಿದೆ. ಪ್ರಾದೇಶಿಕ ಅಸಮಾನತೆ ಮುಂದುವರಿದ ನಂತರ 2002ರಲ್ಲಿ ಮಾನ್ಯ ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿಯೇ ಈ ಬಗ್ಗೆ ಅನೇಕ ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟರು. ಈ ತರಹದ ಅನ್ಯಾಯವಾಗಿದೆ ಎಂದು ಹೇಳಿ ತಾವು ಪ್ರಸ್ತಾಪ ಮಾಡಿದಂತಹ ಮಾನ್ಯ ವೈಜನಾಥ್ ಪಾಟೀಲ್‌ರವರು ಹೋರಾಟ ಮಾಡಿರುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಪ್ರಾದೇಶಿಕ ಅಸಮಾನತೆಯನ್ನು ಸಂವಿಧಾನದ ಆಚೆಗೆ ಸರಿಪಡಿಸುವುದಕ್ಕೆ ಸಾಧ್ಯವೇ ಅನ್ನುವುದರ ಬಗ್ಗೆ ನಮ್ಮ ಪ್ರತಿಪಕ್ಷದ ನಾಯಕರು ಆದ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್‌ರವರ ಅಧ್ಯಕ್ಷತೆಯಲ್ಲಿ ಅವರು ಕೊಟ್ಟಿರುವಂತಹ ವರದಿಯ ಆಧಾರದ ಮೇಲೆಯೇ ಹೈದರಾಬಾದ್ ಅಭಿವೃದ್ಧಿ ಮಂಡಲಿ ರಚನೆಯಾಯಿತು. ಇದು ಆದ ಮೇಲೆ ನಮಗೂ ಕೂಡ ಈ ತೊಂದರೆಗಳು ಇದೆ ಎಂದು ಮಲೆನಾಡು ಅಭಿವೃದ್ಧಿ ಮಂಡಲಿಯಾಯಿತು. ಇದು ಆದ ಮೇಲೆ ಬಯಲುಸೀಮೆ ಅಭಿವೃದ್ಧಿ ಮಂಡಲಿಯಾಯಿತು. ಪ್ರಾದೇಶಿಕ ಅಭಿವೃದ್ಧಿಯನ್ನು ಹೆಚ್ಚಿಸಬೇಕೆಂಬ ಕಾರಣಕ್ಕಾಗಿ ಕಂದಾಯ ಆಯುಕ್ತರನ್ನು ಪ್ರಾದೇಶಿಕ ಆಯುಕ್ತರನ್ನಾಗಿ ನೇಮಕಾತಿ ಮಾಡಿರುವುದು ಕೂಡ ಆಯಿತು. ಇವೆಲ್ಲವೂಗಳ ಮೂಲಕವಾಗಿಯೂ ಕೂಡ ಈ ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಡಾ: ನಂಜುಂಡಪ್ಪ ಆಯೋಗದ ವರದಿಯಲ್ಲಿ ಬಹುಪಾಲಿನ ಎಲ್ಲಾ ತಾರತಮ್ಯಗಳು ಕೂಡ ಈ ಪ್ರದೇಶದಲ್ಲಿ ಇದೆ ಎನ್ನುವುದು ವ್ಯಕ್ತವಾಯಿತು. ಈ ಹಿನ್ನೆಲೆಯಲ್ಲಿ ಅನೇಕ ಬಾರಿ ಸನ್ಮಾನ್ಯ ಮುಖ್ಯಮಂತ್ರಿಗಳು 14–12–2004ರಲ್ಲಿ ಮತ್ತೆ ಪತ್ರವನ್ನು ಬರೆದಾಗ ಅಲ್ಲಿಯ ಕಾರ್ಯದರ್ಶಿ ಶ್ರೀವಾಸ್ತವ ಎಂಬುವವರು ದಿನಾಂಕ: 18–10–2004ರಲ್ಲಿ ಉತ್ತರವನ್ನು ಬರೆಯುತ್ತಾರೆ. ಸಂವಿಧಾನದ ತಿದ್ದುಪಡಿಯನ್ನು ಬಿಟ್ಟು ಬೇರೆ ರೀತಿಯಾಗಿರುವಂಥ ಪರ್ಯಾಯವಾದಂಥ ಮಾರ್ಗೋಪಾಯಗಳು ಇದ್ದರೆ ಅದರ ಬಗ್ಗೆ ನೀವು ಯೋಚನೆಯನ್ನು ಮಾಡಬೇಕೆಂದು ಹೇಳಿ, ಅದರ ಬಗ್ಗೆ ಮತ್ತೆ ಸರ್ಕಾರ ಉತ್ತರವನ್ನು ಕೊಡುತ್ತದೆ. ಆಯಾಯ ಸಂದರ್ಭಗಳಲ್ಲಿ ಸಂವಿಧಾನದ ತಿದ್ದುಪಡಿಯನ್ನು ಮಾಡಲಾರದಂಥ ಸ್ಥಿತಿಯಲ್ಲಿ ನಾವು ಇರಬಹುದು. ಹಿಂದೆ ಒಂದು ಏಕ ಪಕ್ಷದ ಅಧಿಕಾರ ಕೇಂದ್ರ ಸರ್ಕಾರದಲ್ಲಿರುತ್ತಿತ್ತು. ಮಿತ್ರ ಪಕ್ಷಗಳ ಮೂಲಕವಾಗಿ ಅನೇಕ ಮಿತ್ರಪಕ್ಷಗಳನ್ನು ಒಡಗೂಡಿಸಿಕೊಂಡಿರತಕ್ಕಂಥ ಸರ್ಕಾರದಲ್ಲಿ ಸಂವಿಧಾನದ ತಿದ್ದುಪಡಿಯನ್ನು

ಮಾಡುವಾಗ ವಿಧಿನಿಯಮಗಳೇನಿವೆ ಎನ್ನುವುದು ತಮಗೆ ಗೊತ್ತಿದೆ, ಅದು ಬಹಳ ಕಷ್ಟಸಾಧ್ಯವೆನ್ನುವಂಥ ಕಾರಣಕ್ಕಾಗಿ ಕೈಬಿಟ್ಟಿರುವುದು ಮತ್ತೊಂದು ಆಗಿರಬಹುದು, ಇದಾದ ನಂತರ ಸನ್ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 1–4–2005ರಲ್ಲಿ ಪತ್ರವನ್ನು ಬರೆಯುವುದರ ಜೊತೆಗೆ ಮಾನ್ಯ ಗೃಹ ಸಚಿವರನ್ನು ಕಂಡು ಈ ಬಗ್ಗೆ ಖಂಡಿತವಾಗಿಯೂ ತಾವು ಈ ಕಲಂ 371ರ ತಿದ್ದುಪಡಿಯನ್ನು ಅದಕ್ಕೆ ಏನೇ ತಾಂತ್ರಿಕವಾದಂಥ ಎಡರು ತೊಡರುಗಳು ಇರಲಿ, ತರಬೇಕು. ಏಕೆಂದರೆ ಸಂವಿಧಾನಕ್ಕೆ ತಿದ್ದುಪಡಿ ತರಲು ಎರಡನೇ ಮೂರಂಶದ ಬಹುಮತ ಉಭಯ ಸದನಗಳಲ್ಲಿ ಬರಬೇಕು. ಅದಾದ ನಂತರ ಎರಡು ಮೂರನೇ ಅಂಶದಷ್ಟಿರುವಂಥ ರಾಜ್ಯ ಸರ್ಕಾರಗಳಲ್ಲಿ ಎರಡು ಮೂರನೇ ಅಂಶದಷ್ಟು ಬಹುಮತ ಬಂದಾಗ ಮಾತ್ರ ಸಂವಿಧಾನದ ತಿದ್ದುಪಡಿಯಾಗುತ್ತದೆ. ಅದೇನೇ ಆಗಿರಲಿ, ನ್ಯಾಯಯುತವಾಗಿರತಕ್ಕಂಥ ನಮ್ಮ ಬೇಡಿಕೆಗೆ ತಿದ್ದುಪಡಿಯನ್ನು ತರಬೇಕೆಂದು ಹೇಳಿ ಪ್ರಸ್ತಾಪ ಮಾಡಿದ ಹಿನ್ನೆಲೆಯಲ್ಲಿ ಮೊನ್ನ ದಿವಸ ದಿನಾಂಕ: 20–05–2007 ರಂದು ಗೃಹ ಸಚಿವರು ಈ ನಿಮ್ಮ ಮನವಿಯನ್ನು ಸಹಾಯನು ಭೂತಿಯಿಂದ ಪರಿಶೀಲಿಸಿ ಅದರ ಬಗ್ಗೆ ವರದಿಯನ್ನು ಕೊಡಬೇಕೆಂದು ಹೇಳಿ ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಮಾಡಿದ್ದೇನೆಂದು ಪತ್ರವನ್ನು ಬರೆದಿದ್ದಾರೆ. ಪ್ರಾಯಶಃ ಈ ಸಲ ಸಕಾರಾತ್ಮಕವಾಗಿರುವಂಥ ಉತ್ತರ ಕೇಂದ್ರ ಸರ್ಕಾರದಿಂದ ಬಂದಿರುವುದರಿಂದ ಮಾನ್ಯ ಧರಂಸಿಂಗ್‌ರವರಿಗೆ ಇಲ್ಲಿರತಕ್ಕಂಥ ಅನೇಕರಿಗೆ ಮಾನ್ಯ ಕೇಂದ್ರ ಗೃಹ ಸಚಿವರಾದ ಶಿವರಾಜ್ ಪಾಟೀಲ್ ಜೊತೆಗೆ ಮಧುರವಾದ ಸಂಬಂಧದ ಹಿನ್ನೆಲೆ ಇರುವಂಥ ಕಾರಣಕ್ಕಾಗಿಯೇ ಪ್ರಾಯಶಃ ನಮ್ಮ ಬೇಡಿಕೆಗೆ ಮಾನ್ಯತೆ ಬರಬಹುದು ಎಂದು ಕೊಂಡಿದ್ದೇವೆ. ತಾವು ಹೇಳಿದಂತೆ ಸರ್ವ ಪಕ್ಷಗಳ ನಿಯೋಗವನ್ನು ಕೂಡ ತೆಗೆದುಕೊಂಡು ಹೋಗುವುದರ ಜೊತೆಗೆ 03–08–2007 ರಂದು ಇಲ್ಲಿಗೆ ಮಾನ್ಯ ಪ್ರಧಾನ ಮಂತ್ರಿಗಳು ಬಂದಾಗ ಸಭಾನಾಯಕರು ಮತ್ತು ಪ್ರತಿಪಕ್ಷದ ನಾಯಕರು ಇತರ ಎಲ್ಲರ ಸಮೇತರಾಗಿ ಮತ್ತೊಂದು ಸಲ ಅವರಿಗೆ ಜ್ಞಾಪಕ ಮಾಡಲಿಕ್ಕೆ ಸರ್ಕಾರ ತಯಾರಿದೆ ಎನ್ನುವಂಥ ಮಾತನ್ನು ಹೇಳಬಯಸುತ್ತೇನೆ.